ವಿಷಯ - ಮೂಡಬಿದರೆ ಬೈಪಾಸ್ ರಸ್ತೆ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 379 (600)

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದರೆಯ ಬೈಪಾಸಿನ ಬಗ್ಗೆ ಭೂಮಿ ಸ್ವಾಧೀನ ಪಡೆಯುವ ಕಾರ್ಯ ಯಾವ ಹಂತದಲ್ಲಿದೆ?

ಆ) ಬೈಪಾಸಿನ ಕೆಲಸವಾಗಲು ಇಷ್ಟು ನಿಧಾನವಾಗಲು ಕಾರಣವೇನು?

ಇ) ಮೂಡಬಿದರೆಯಲ್ಲಿ ಸದ್ಯದ ವಾಹನ ದಟ್ಟಣೆ ಸಮಸ್ಯೆ ಸರಕಾರದ ಗಮನಕ್ಕೆ ಬಂದಿದೆಯೇ?

ಈ) ಇದರ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಅವಾರ್ಡು ಹಂತದಲ್ಲಿರುತ್ತದೆ.

ಆ) ಬೈಪಾಸ್ ರಸ್ತೆ ಮಾರ್ಗದಲ್ಲಿ ಬರುವ ಸ್ವರಾಜ್ ಮೈದಾನದಲ್ಲಿ ಹಾಗೂ ಒಂದು ಖಾಸಗಿ ಜಮೀನಿನಲ್ಲಿ ಭೂಸ್ವಾಧೀನಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದ ತಡೆ ಆಜ್ಞೆ ಇರುವುದರಿಂದ ಕಾಮಗಾರಿಯಲ್ಲಿ ವಿಳಂಬವಾಗುತ್ತಿದೆ.

ಇ) ಬಂದಿದೆ.

ಈ) ಉಚ್ಚ ನ್ಯಾಯಾಲಯದಲ್ಲಿ ವಿವಾದ ತೀರ್ಮಾನವಾಗಿ ಕಂದಾಯ ಇಲಾಖೆಯಿಂದ ಜಮೀನನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿಷಯ - ಕಟೀಲು ಬೈಪಾಸ್ ರಸ್ತೆ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 380 (602)

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಾವಿರಾರು ಯಾತ್ರಿಕರು ಪ್ರತಿ ದಿನ ಸಂದರ್ಶಿಸುತ್ತಿರುವ ಕಟೀಲು ಪ್ರದೇಶದಲ್ಲಿ ರಸ್ತೆ ವಾಹನಗಳಿಂದಾಗಿ ತಡೆಯಾಗುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಇಲ್ಲಿಯ ಬೈಪಾಸ್ ರಚನೆಯು ಕಾರ್ಯಗತವಾಗುವುದು ತಡವಾಗಲು ಕಾರಣವೇನು?